**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>Spl.C.181/2017</u>**

ದಿನಾಂಕ 26.03.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 46 ಪ್ರಾಸಾ - 17

| | | |
|---|---|---|
| ಹೆಸರು | ಃ | ಪುರುಷೋತ್ತಮ್ ಎಂ.ಎಲ್. |
| ತಂದೆಯ ಹೆಸರು | ಃ | ಲಕ್ಷ್ಮಣಗೌಡ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಹೆಚ್ಚುವರಿ ಎಸ್ ಪಿ, ತುಮಕೂರು ಜಿಲ್ಲೆ |
| ವಾಸಸ್ಥಳ | ಃ | ತುಮಕೂರು |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 08.07.2017 ರಿಂದ 20.08.2018 ರವರಗೆ ನಾನು ಡಿವೈಎಸ್‌ಪಿ ಮಾಗಡಿ ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 15.09.2017 ರಂದು ಈ ಪ್ರಕರಣದ ಕಡತವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮನಗರ ಇವರ ಆದೇಶದಂತೆ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ 45 ರಿಂದ ಪಡೆದು ತನಿಖೆ ಮುಂದುವರಿಸಿರುತ್ತೇನೆ.

3. ದಿನಾಂಕ 16.09.2017 ರಂದು ಪಿಎಂ ವರದಿ ಮತ್ತು ವಿಸೇರಾವನ್ನು ಆರ್.ಆರ್. ಆಸ್ಪತ್ರೆಯಿಂದ ಪಡೆದುಕೊಂಡು ಅದನ್ನು ಪಿಎಫ್ ಸಂಖ್ಯೆ 121/2017 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಪಿಎಂ ವರದಿ ನಿಶಾನೆ ಪಿ 22 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ22(ಬಿ) ಎಂದು ಗುರುತಿಸಲಾಯಿತು.

4. ದಿನಾಂಕ 22.09.2017 ರಂದು 1 ಮತ್ತು 2ನೇ ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಮಾಗಡಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಘಟನಾ ಸ್ಥಳದ ನಕ್ಷೆ ತಯಾರಿಸಿ ಕೊಡುವಂತೆ ಪಿಡಬ್ಲ್ಯೂಡಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತೇನೆ.

5. ದಿನಾಂಕ 04.10.2017 ರಂದು ವಶಪಡಿಸಿಕೊಂಡ ವಸ್ತುವನ್ನು ಎಫ್.ಎಸ್.ಎಲ್. ಮಡಿವಾಳಕ್ಕೆ ಪರೀಕ್ಷೆಗಾಗಿ ಠಾಣಾ ಸಿಬ್ಬಂದಿ ಗಜೇಂದ್ರಕುಮಾರ್ ಚಾಸಾ 38 ರವರ ಮೂಲಕ ಕಳುಹಿಸಿಕೊಟ್ಟು ಅದಕ್ಕೆ ಹಿಂಬರಹವನ್ನು ಪಡೆದುಕೊಂಡಿರುತ್ತೇನೆ. ಸದರಿ ಹಿಂಬರಹ ನಿಶಾನೆ ಪಿ 24 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 24(ಎ) ಎಂದು ಗುರುತಿಸಲಾಯಿತು.

6. ದಿನಾಂಕ 08.10.2017 ರಂದು ಪಿರ್ಯಾದುದಾರ ಮತ್ತು ಮೃತ ವ್ಯಕ್ತಿಯ ಜಾತಿಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಯ ಅನುಸಾರ ಅವರಿಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಸದರಿ ದಾಖಲಾತಿಯನ್ನು ಈಗಾಗಲೇ ನಿಶಾನೆ ಪಿ 16 ಎಂದು ಗುರುತಿಸಲಾಗಿದೆ.

7. ದಿನಾಂಕ 11.10.2017 ರಂದು 1 ಮತ್ತು 2ನೇ ಆರೋಪಿ ಜಾತಿಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಯ ಅನುಸಾರ 1ನೇ ಆರೋಪಿ ತಿಗಳ ಮತ್ತು 2ನೇ ಆರೋಪಿ ಒಕ್ಕಲಿಗ ಜಾತಿಗೆ ಸೇರಿದವರಾಗಿರುತ್ತಾರೆ. ಸದರಿ ದಾಖಲಾತಿಯನ್ನು ಈಗಾಗಲೇ ನಿಶಾನೆ ಪಿ 18 ಎಂದು ಗುರುತಿಸಲಾಗಿದೆ.

8. ದಿನಾಂಕ 10.10.2017 ರಂದು 3ನೇ ಆರೋಪಿ ಜಾತಿಪ್ರಮಾಣ ಪತ್ರವನ್ನು ಚನ್ನಪಟ್ಟಣ ತಹಶೀಲ್ದಾರ್ ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ

ದಾಖಲಾತಿಯ ಅನುಸಾರ 3ನೇ ಆರೋಪಿ ಒಕ್ಕಲಿಕ ಜಾತಿಗೆ ಸೇರಿದವರಾಗಿರುತ್ತಾರೆ. ಸದರಿ ದಾಖಲಾತಿಯನ್ನು ಈಗಾಗಲೇ ನಿಶಾನೆ ಪಿ 19 ಎಂದು ಗುರುತಿಸಲಾಗಿದೆ.

9. ದಿನಾಂಕ 11.10.2017 ರಂದು ಪಿಎಫ್ ಸಂಖ್ಯೆ 121/2017 ರಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ಆರ್.ಎಫ್.ಎಸ್.ಎಲ್. ಮೈಸೂರಿಗೆ ಪರೀಕ್ಷೆಗಾಗಿ ಠಾಣಾ ಸಿಬ್ಬಂದಿ ಗಜೇಂದ್ರಕುಮಾರ್ ಚಾಸಾ 38 ರವರ ಮೂಲಕ ಕಳುಹಿಸಿಕೊಟ್ಟು ಅದಕ್ಕೆ ಹಿಂಬರಹವನ್ನು ಪಡೆದುಕೊಂಡಿರುತ್ತೇನೆ. ಸದರಿ ಹಿಂಬರಹ ನಿಶಾನೆ ಪಿ 25 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 25(ಎ) ಎಂದು ಗುರುತಿಸಲಾಯಿತು.

10. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಕೆಎ-41-ಸಿ-0945 ನ್ನು ದಿನಾಂಕ 28.10.2017 ರಂದು ನ್ಯಾಯಾಲಯದ ಅದೇಶದನ್ವಯ ಅರ್ಜಿದಾರನ ವಶಕ್ಕೆ ಬಿಟ್ಟುಕೊಟ್ಟು ಮಹಜರ್ ಬರೆದು ಆ ಸಮಯದಲ್ಲಿ ತೆಗೆದಂತಹ ಫೋಟೋಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಸದರಿ ಫೋಟೋಗಳನ್ನು ನಿಶಾನೆ ಪಿ 4 ರಿಂದ 7 ಎಂದು ಈಗಾಗಲೇ ಗುರುತಿಸಲಾಗಿದೆ. ವಾಹನ ಬಿಡುಗಡೆ ಮಹಜರ್ ನ್ನು ನಿಶಾನೆ ಪಿ 20 ಎಂದು ಈಗಾಗಲೇ ಗುರುತಿಸಲಾಗಿದೆ.

11. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಕೆಎ-51-ಎಂಡಿ-2732 ಮಾರುತಿ ರಿಟ್ಜ್ ನ್ನು ದಿನಾಂಕ 03.11.2017 ರಂದು ನ್ಯಾಯಾಲಯದ ಅದೇಶದನ್ವಯ ಅರ್ಜಿದಾರನ ವಶಕ್ಕೆ ಬಿಟ್ಟುಕೊಟ್ಟು ಮಹಜರ್ ಬರೆದು ಆ ಸಮಯದಲ್ಲಿ ತೆಗೆದಂತಹ ಫೋಟೋಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಸದರಿ ಫೋಟೋಗಳನ್ನು ನಿಶಾನೆ ಪಿ 8 ರಿಂದ 11 ಎಂದು

ಈಗಾಗಲೇ ಗುರುತಿಸಲಾಗಿದೆ. ವಾಹನ ಬಿಡುಗಡೆ ಮಹಜರ್ ನ್ನು ನಿಶಾನೆ ಪಿ 21 ಎಂದು ಈಗಾಗಲೇ ಗುರುತಿಸಲಾಗಿದೆ.

12. ತನಿಖೆ ಮುಕ್ತಾಯ ಗೊಳಿಸಿ ಆರೋಪಿಗಳ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಕಂಡುಬಂದಿದ್ದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

13. ದಿನಾಂಕ 09.11.2017 ರಂದು ಎಫ್‌ಎಸ್‌ಎಲ್ ಮಡಿವಾಳದಿಂದ ವರದಿ ಬಂದಿದ್ದು, ಅದನ್ನು ನಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿನಾಂಕ 07.12.2017 ರಂದು ಪಿಡಬ್ಲ್ಯೂಡಿ ಇಲಾಖೆಯಿಂದ ನಕ್ಷೆ ಸ್ವೀಕರಿಸಿದ್ದು, ಅದನ್ನು ನಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಎಫ್‌ಎಸ್‌ಎಲ್ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 26 ಮತ್ತು ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 26 (ಎ) ಎಂದು ಗುರುತಿಸಲಾಯಿತು. ಪಿಡಬ್ಲ್ಯೂಡಿ ಇಲಾಖೆಯಿಂದ ನಕ್ಷೆಯನ್ನು ಈಗಾಗಲೇ ನಿಶಾನೆ ಪಿ 23 ಎಂದು ಗುರುತಿಸಲಾಗಿದೆ.

14. ದಿನಾಂಕ 13.04.2018 ರಂದು ಆರ್.ಎಫ್‌ಎಸ್‌ಎಲ್ ಮೈಸೂರಿನಿಂದ ವರದಿ ಬಂದಿದ್ದು, ಅದನ್ನು ನಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಎಫ್‌ಎಸ್‌ಎಲ್ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 27 ಮತ್ತು ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 27(ಎ) ಎಂದು ಗುರುತಿಸಲಾಯಿತು. ಎಫ್‌ಎಸ್‌ಎಲ್ ಮತ್ತು ಆರ್.ಎಫ್‌ಎಸ್‌ಎಲ್ ಗೆ ಕಳುಹಿಸಿಕೊಟ್ಟಂತಹ ಪ್ಯಾಕ್ ಮಾಡಿ ಮೊಹರು ಮಾಡಿದ ಪೊಟ್ಟಣಗಳನ್ನು ನೋಡಿದರೆ ಗುರುತಿಸಬಲ್ಲೆ. ಅದಕ್ಕೆ ಲಗತ್ತಿಸಿರುವಂತಹ ಚೀಟಿಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ವಸ್ತುಗಳನ್ನು ಮುದ್ದೆಮಾಲು 1 ರಿಂದ 7 ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲುಃ 2ನೇ ಆರೋಪಿ ಪರವಾಗಿ ಶ್ರೀ.ಟಿ.ಜಿ., ವಕೀಲರಿಂದಃ**

15. ಮುಂದಿನ ತನಿಖೆಗಾಗಿ ಕಡತ ಸ್ವೀಕರಿಸಿದ ನಂತರ ನಾನು ಸ್ಥಳಕ್ಕೆ ಬೇಟಿ ಕೊಟ್ಟಿಲ್ಲ. ಆರೋಪಿಗಳ ಮೊಬೈಲ್ ಕಾಲ್ ಡಿಟೈಲ್ಸ್ ಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಆರೋಪಿಗಳ ಮೊಬೈಲ್ ಟವರ್ ಲೊಕೇಷನ್ ಗಳನ್ನು ಸಹ ಪಡೆದುಕೊಂಡಿಲ್ಲ ಎಂದರೆ ಸರಿ. ಮೃತನ ಮೊಬೈಲ್ ಕಾಲ್ ಡಿಟೈಲ್ಸ್ ಮತ್ತು ಮೊಬೈಲ್ ಟವರ್ ಲೊಕೇಷನ್ ಗಳನ್ನು ಸಹ ಪಡೆದುಕೊಂಡಿಲ್ಲ ಎಂದರೆ ಸರಿ. ಅಲ್ಲಿ ದೊರೆತಿದೆ ಎಂದು ಹೇಳುವ ರಕ್ತದ ಮಾದರಿಯನ್ನು ಬ್ಲಡ್ ಗ್ರೂಪಿಂಗ್ ಮಾಡಲು ಎಫ್‌ಎಸ್‌ಎಲ್ ಗೆ ಮನವಿ ಮಾಡಿಕೊಂಡಿಲ್ಲ. ಮೃತ ವ್ಯಕ್ತಿ 2ನೇ ಆರೋಪಿಯನ್ನು ಪ್ರೀತಿಸಿ ಮದುವೆಯಾಗಿದ್ದ ಎಂದು ನನ್ನ ತನಿಖಾ ಸಮಯದಲ್ಲಿ ಕಂಡು ಬಂದಿರುತ್ತದೆ ಎಂದರೆ ಸಾಕ್ಷಿ ಹೇಳಿಕೆ ಆಧಾರದಲ್ಲಿ ಅದು ಕಂಡು ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ಮೃತ ವ್ಯಕ್ತಿ ಅತಿಯಾದ ಮದ್ಯಪಾನ ಮಾಡುತ್ತಿದ್ದು, ಮನೆಗೆ ಬೇಕಾದಂತಹ ವಸ್ತುಗಳನ್ನು ತಂದು ಕೊಡುತ್ತಿರಲಿಲ್ಲ ಎಂದರೆ ಸಾಕ್ಷಿ, ಸಾಕ್ಷಿದಾರರ ಹೇಳಿಕೆಯ ಪ್ರಕಾರ ಅದು ಕಂಡು ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ.

16. ಪ್ರಸ್ತುತ ಘಟನೆಗಿಂತ ಒಂದು ವರ್ಷದ ಪೂರ್ವದಿಂದಲೇ ಮೃತ ವ್ಯಕ್ತಿ ಅತಿಯಾಗಿ ಮದ್ಯಪಾನ ಮಾಡಿ ಗಲಾಟೆ ಮಾಡಿ, 2ನೇ ಆರೋಪಿಗೆ ಹೊಡೆಯುತ್ತಿದ್ದ ಕಾರಣ 2ನೇ ಆರೋಪಿ ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಳು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಸಾಕ್ಷಿದಾರರಿಗೆ ನೋಟೀಸ್ ನೀಡಿಲ್ಲ ಎಂದರೆ ಸರಿ. ಪೊಲೀಸ್ ಠಾಣೆಗಳಿಗೆ ಹ್ಯಾಂಡಿ ಕ್ಯಾಮೆರಾ ಮತ್ತು ಡಿಜಿಟಲ್ ಕ್ಯಾಮೆರಾಗಳನ್ನು ತನಿಖೆಯ ಸಲುವಾಗಿ ನೀಡಲಾಗಿದೆ ಎಂದರೆ ಸಾಕ್ಷಿ ಕೆಲವು ಠಾಣೆಗಳಿಗೆ ಕೊಟ್ಟಿದ್ದು, ಕೆಲವು ಠಾಣೆಗಳಿಗೆ ಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ.

17. ಸಾಮಾನ್ಯವಾಗಿ ಮುದ್ದೆಮಾಲು 1 ರಷ್ಟು ಭಾರದ ಕಲ್ಲನ್ನು ಮನುಷ್ಯನ ತಲೆಯ ಮೇಲೆ ಹೊತ್ತು ಹಾಕಿದರೆ ತಲೆ ಜಜ್ಜಿ ಹೋಗುವ ಸಂಭವವಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಹೇಳಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ನನ್ನ ತನಿಖಾ ಸಮಯದಲ್ಲಿ ನಾನು ಮುದ್ದೆಮಾಲು 1 ಎಷ್ಟು ಭಾರವಿದೆ ಎಂದು ತೂಕ ಮಾಡಿಲ್ಲ. ಮುದ್ದೆಮಾಲು 1 ರಂತಹ ಕಲ್ಲನ್ನು ತಲೆಯ ಮೇಲೆ ಹೊತ್ತು ಹಾಕಿದಾಗ ತಲೆಯ ಕೂದಲು, ರಕ್ತ ಮತ್ತು ಮಾಂಸದ ತುಣುಕುಗಳು ಅಂಟಿಕೊಳ್ಳುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಅಂಟಿಕೊಳ್ಳಬಹುದು ಅಥವಾ ಅಂಟಿಕೊಳ್ಳದೇ ಇರಬಹುದು ಎಂದು ಉತ್ತರಿಸಿರುತ್ತಾರೆ. ಮೃತನ ಫೋಟೋ ನಿಶಾನೆ ಪಿ 15 ರಲ್ಲಿ ಆತನ ಮುಖ ಜಜ್ಜಿ ಹೋಗಿರುವುದು ಕಂಡುಬರುವುದಿಲ್ಲ ಎಂದರೆ ಸರಿ, ಆದರೆ ತಲೆಯ ಹಿಂಭಾಗದಲ್ಲಿ ಜಜ್ಜಿರುವ ಭಾಗ ಸದರಿ ಫೋಟೋದಲ್ಲಿ ಕಂಡುಬಂದಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಆತನ ತಲೆ ಅಥವಾ ಮುಖದ ಭಾಗ ಜಜ್ಜಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ದೇಹ ಬಿದ್ದಿರುವಂತಹ ಜಾಗದ ಸುತ್ತಲಿನ ಜಾಗವನ್ನು ಸಹ ತನಿಖಾ ಸಮಯದಲ್ಲಿ ಪರಿಶೀಲಿಸಲಾಗುತ್ತದೆ ಎಂದರೆ ಸರಿ.

18. ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ, ಆದರೂ ಸಹ ಸೃಷ್ಟನೆಯ ವಸ್ತುಗಳನ್ನು ಎಫ್‌ಎಸ್‌ಎಲ್ ಗೆಕಳುಹಿಸಿಕೊಡಲಾಗಿದೆ ಎಂದರೆ ಸರಿಯಲ್ಲ. ಮಾಲುಪಟ್ಟಿಯನ್ನು ಸೃಷ್ಟನೆ ಮಾಡಲಾಗಿದೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಸೃಷ್ಟನೆ ಮಾಡಿ ಅದಕ್ಕೆ ಪೂರಕವಾಗುವಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖಾ ಸಮಯದಲ್ಲಿ ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ ಎಂದು ಕಂಡುಬಂದರು ಸಹ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಗೆ ಅತಿಯಾಗಿ ಮದ್ಯಪಾನ ಮಾಡುವ ಚಟವಿರುವ ಕಾರಣ ಆತ

ಕುಡಿತದ ಮತ್ತಿನಲ್ಲಿ ಬಿದ್ದು ಏಟು ಮಾಡಿಕೊಂಡಿರುವುದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರು ನೀಡಿದರನ್ವಯ ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

**ವಾಟೀಸವಾಲುಃ 1ನೇ ಆರೋಪಿ ಪರ ಶ್ರೀ.ಬಿಹೆಚ್‌ಸಿಕೆ ವಕೀಲರ ಪರವಾಗಿ ಕುಮಾರಿ ಅಶ್ವಿನಿ ವಕೀಲರಿಂದಃ**

19. 1ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಯನ್ನು ನಾನು ಮುಖ್ಯವಿಚಾರಣೆಯಲ್ಲಿ ಹೇಳಿಕೊಂಡಂತೆ ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗುವಂತೆ ದಾಖಲಾತಿಗಳನ್ನು ಸೃಷ್ಟನೆ ಮಾಡಲಾಗಿದೆ ಎಂದರೆ ಸರಿಯಲ್ಲ. 1ನೇ ಆರೋಪಿಯ ವಿರುದ್ಧಸಾಕಷ್ಟು ಸಾಕ್ಷ್ಯಾ ಧಾರಗಳು ಇಲ್ಲದೇ ಇದ್ದರೂ ಸಹ ಆತನನ್ನು ವಿನಾಃ ಕಾರಣ ಈ ಪ್ರಕರಣದಲ್ಲಿ ಸೇರಿಸಿ ಸುಳ್ಳುದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

**ಇನ್ನುಳಿದ ವಾಟೀಸವಾಲಿಗೆ 2ನೇ ಆರೋಪಿಯ ವಾಟೀಸವಾಲನ್ನು 1ನೇ ಆರೋಪಿಯ ಪರ ವಕೀಲರು ಅನುಮೋದಿಸಿಕೊಂಡಿರುತ್ತಾರೆ.**

**ವಾಟೀಸವಾಲುಃ 3ನೇ ಆರೋಪಿ ಪರ ಶ್ರೀ.ಡಿಎನ್‌ಹೆಚ್ ವಕೀಲರ ಪರವಾಗಿ ಶ್ರೀಮತಿ.ಕೆ.ಎಸ್. ವಕೀಲರಿಂದಃ 2ನೇ ಆರೋಪಿಯ ಪರ ವಾಟೀಸವಾಲನ್ನು 3ನೇ ಆರೋಪಿ ಪರ ವಕೀಲರು ಅನುಮೋದಿಸಿಕೊಂಡಿರುತ್ತಾರೆ.**

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**